ಮಾತನಾಡುವಂತಿಲ್ಲ. ಅದೇ ಸಂಜೆ ನೂನಿ ಗುರಾಯಿ ಹನ್ನೆರಡಾಣೆ ಎಲೆ ಅಡಿಕೆ ದಕ್ಷಿಣೆ ಇಟ್ಟು ಕಂದಮ್ಮನ ಕೈ ಹಿಡಿದುಕೊಂಡಾಗ ಕಂದಮ್ಮನ ಇಬ್ಬರು ಹೆಣ್ಣುಮಕ್ಕಳು ಅಳ ಹತ್ತಿದವು. ಅಂತೂ ತನ್ನ ಎರಡು ಹೆಣ್ಣುಮಕ್ಕಳನ್ನು ಅಣ್ಣನ ಮಡಿಲಿಗೆ ಹಾಕಿ ಕಾರಣ ತಂಗಿಯ ಮಕ್ಕಳು ಹೆಣ್ಣಾದರೆ ಸೋದರ ಮಾವನ ಹಕ್ಕು ಎಂದು ಕುಲದ ಕಟ್ಟೇಮನಿ ಹೇಳಿದ್ದು, ಅದರಂತೆ ಮಕ್ಕಳ ಬಿಟ್ಟು ಹೊರಟ ಕಂದಮ್ಮ ಮತ್ತ ಕಾಣಿಸಿದ್ದು ಎಂಟು ವರ್ಸದ ಮ್ಯಾಲ ಹೊಸೂರು ಬೆಟ್ಟದ ಜಾತ್ರೀನಾಗ.

ಆದರೆ ತಂದೆತಾಯಿ ಇಬ್ಬರನ್ನೂ ಹೀಗೆ ಕಳೆದುಕೊಂಡ ನನ್ನ ಅಜ್ಜಿ ನಾರಕ್ಕ ತಾತ ಈಬೂತಿ ಎಂಕಟಪ್ಪನನ್ನು ಕೂಡಿಕೊಂಡ ಮ್ಯಾಲ ನನ್ನ ಬದುಕಿನ ಕತೆಯು ಪ್ರಾರಂಭವಾಗುತ್ತದೆ. ಇದನ್ನು ಕತೆ ಎಂದರೆ ನನ್ನ ಈ ಅಲೆಮಾರಿ ಜಗತ್ತಿಗೆ ಅವಮಾನವಾಗುತ್ತದೆ. ಇದು ಆದಿಮ ಜಗತ್ತಿನ ಲಾವಣಿ. ಹಾಗಾಗಿ ನನ್ನ ಮೇಲೆ ಅಪಾರ ಪ್ರಭಾವ ಬೀರಿದ ನನ್ನ ಅಜ್ಜಿ ನಾರಕ್ಕನಿಂದಲೇ ಪ್ರಾರಂಭಿಸುತ್ತೇನೆ.

## ಮೋಟು ಮೊಗ್ಗ

ಅಜ್ಜಿ ನಾರಕ್ಕ ನನ್ನ ತಾತನನ್ನು ಸೇರಿಕೊಂಡ ಮ್ಯಾಲ ನಿಧಾನವಾಗಿ ತನ್ನ ಬಾಲ್ಯದ ಕಹಿನೆನಪುಗಳನ್ನು ಮರೆಯತೊಡಗಿದಳು. ತಾತನೊಂದಿಗೆ ಸಾವಿರಾರು ಹಳ್ಳಿ ಸುತ್ತಿದಳು. ತಾತನಿಗೆ ಕೋಲಾರ ಸೀಮೆಗಿಂತ ಹೊಸೂರು, ಕೃಷ್ಣಗಿರಿ, ಕಾನಕಾನಹಳ್ಳಿ, ಕೊಳ್ಳೇಗಾಲ, ಮಳವಳ್ಳಿ, ಆನೇಕಲ್ ಸೀಮೆ ಇಷ್ಟವಾಗಿತ್ತು. ತಾತ ಊರಾಚೆ ಕುಳಿತು ಮಸಣಸಿದ್ದನಂತೆ ಸಿಂಗರಿಸಿಕೊಂಡು ಕಿವಿಗೆ ಬುಗುಡಿ, ಕೊರಳಿಗೆ ರುದ್ರಾಕ್ಷಿ ಸರ, ಮೈಯೆಲ್ಲಾ ಬೂದಿ ಬಳಿದುಕೊಂಡು ಕಾವಿ ಲಂಗೋಟಿ ಸುತ್ತಿಕೊಂಡು, ಹೆಗಲಿಗೆ ಜೋಳಿಗೆ ಹಾಕಿಕೊಂಡು, 'ಜೈ ಮಾದೇಸ್ವರ... ಮಾಯ್ಕಾರ ಸಿದ್ದ...' ಎಂದು ಊರೊಳಗೆ ಪ್ರವೇಶಿಸುತ್ತಿದ್ದ. ಸಂಜೆ ಟೆಂಟಿಗೆ ವಾಪಸಾಗುತ್ತಿದ್ದಂತೆ ಯಾಸ ಕಳಚಿ ಬೇಟೆಗೆ ಬಲೆ ಉರ್ಲುಗಳನ್ನು ಬಗಲಲ್ಲಿಟ್ಟುಕೊಂಡು ಅಳಿಲು, ಆಮೆ, ಮೊಲಗಳನ್ನು ಯಥೇಚ್ಛವಾಗಿ ತಂದು ಸುಡುತ್ತಿದ್ದ.

'ಮಾಂಸದ ತುಣುಕು ಇಲ್ಲದ ಊಟ ಕಲ್ಲಂಗಡಿ ತ್ವಾಟ' ಎಂದು ಮೀಸೆ ತಿರುವುತ್ತಿದ್ದ. ತನ್ನ ಜೀವಮಾನವಿಡೀ ಮಾಂಸದ ಸಾರನ್ನು ತಾನೇ ಬೇಯಿಸಿ ಸಿದ್ಧ ಮಾಡುತ್ತಿದ್ದ. ಪುಟಗೋಸಿ ಕಟ್ಟಿಕೊಂಡು ಬಯಲಲ್ಲಿ ನಾಲ್ಕು ಕಲ್ಲು ಇಟ್ಟು ಒಲೆ ಹತ್ತಿಸಿ ಮಾಂಸದ ಸಾರು ಬೇಯಿಸುತ್ತಿದ್ದರೆ ಸುತ್ತಲ ಬಯಲೆಲ್ಲಾ ಗಮ್ಮೆನ್ನುತ್ತಿತ್ತು. ಒಮ್ಮೊಮ್ಮೆ ಎಂಟ್ಹತ್ತು ಆಮೆಗಳನ್ನು ತಂದು ಸಿಗಿದು ಬಿಸಿಲಿಗೆ ಒಣ ಹಾಕುತ್ತಿದ್ದ. ಬೇಟೆಗೆ ಹೋಗದಿದ್ದಾಗ ಒಣಗಿದ ಚೂರುಗಳಿಗೆ ಉಪ್ಪುಖಾರ ಹಾಕಿದರೆ ಚಾಕನ ರೆಡಿಯಾಗಿ ಬಿಡುತ್ತಿತ್ತು. ನಂತರ ತಕಾರಿಗೆ ತುಂಬಿಸಿಕೊಂಡು ಅಜ್ಜಿ ನಾರಕ್ಕನೊಂದಿಗೆ ಹೆಂಡದಂಗಡಿಗೆ ಹೋಗುತ್ತಿದ್ದ. ಅಲ್ಲಿ ಶಾಕನದ ಜೊತೆ ಹೆಂಡವನ್ನು ಸಂಭ್ರಮಿಸಿ ಅಜ್ಜಿಯ ಕೈ ಹಿಡಿದುಕೊಂಡು ಗೂಡ್ಲಿಗೆ ಬರುವಾಗ ಅಜ್ಜಿ ಚಿತ್ತಾಗಿ ಬಿಡುತ್ತಿದ್ದಳು.

ಐದು ವರ್ಷದಿಂದಲೇ ಕೇಳಿಕೆಯಲ್ಲಿ ಹಾಡುತ್ತಿದ್ದ ಅಜ್ಜಿ ಬಾಯಿಬಿಟ್ಟರೆ ಕೈವಾರ ತಾತನ ಕೀರ್ತನೆಗಳು ಬಿಚ್ಚಿಕೊಳ್ಳುತ್ತಿದ್ದವು.

ಯಾವೂರು ನೀವೂರು ತುಮ್ಮಿದಾ,
ಎಂದುಂಡಿ ವಸ್ತುವೆ ತುಮ್ಮಿದಾ,